3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.

---

**ಅಸಲು ದಾವಾ ನಂ : 794/2019** **ದಿನಾಂಕ : 13.03.2020**
**ಪಿ.ಡಬ್ಲ್ಯೂ : 02**

---

ಃಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತುಃ

*******

ಸಾಕ್ಷಿಯ ಹೆಸರು: ಶ್ರೀ ಜಾರ್ಜ್ ಜಾನ್ ಕೋಳಿಕಾಡನ್

ವಯಸ್ಸು : 47 ವರ್ಷ

ವೃತ್ತಿ : ತಾಲೂಕಾ ಸರ್ವೇಯರ್, ಅಥಣಿ

ಸ್ಥಳ : ಅಥಣಿ

ಮುಖ್ಯವಿಚಾರಣೆಃ- ವಾದಿ ಪರ ವಕೀಲರಾದ ಶ್ರೀ ಸಿ.ಬಿ.ಪಿ. ರವರಿಂದಃ-

ಸಾಕ್ಷಿಗೆ ಈಗ ನಿಪಿ 3 ರ ಪಿ ಟಿ ಶೀಟನ್ನು ತೋರಿಸಲಾಗಿ ಅದನ್ನು ಗುರುತಿಸಿ ತಾನೆ ಮೋಜಣಿ ಮಾಡಿ ತಯಾರು ಮಾಡಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ರಿ ಸ ನಂ. 1506/2 ಇದು ವಾದಿಗೆ ಸೇರಿದ ಜಮೀನು ಇರುತ್ತದೆ. ಪ್ರತಿವಾದಿಗೆ ಸೇರಿದ ರಿ ಸ ನಂ.1506/1 ಇದರ ಪೂರ್ವ ದಿಕ್ಕಿನಲ್ಲಿ ವಾದಿಗೆ ಸೇರಿದ ಜಮೀನಿನಲ್ಲಿ 11 ಗುಂಟೆ ಕ್ಷೇತ್ರವನ್ನು ಅತಿಕ್ರಮಣ ಮಾಡಿರುತ್ತಾರೆ. ಸದರಿ ಅತಿಕ್ರಮಣವನ್ನು ನಿಪಿ-3 ರ ನಕ್ಷೆಯಲ್ಲಿ ತೋರಿಸಿದ್ದು, ಅದನ್ನು ಗುಲಾಬಿ ಬಣ್ಣದಿಂದ ಗುರುತು ಮಾಡಿರುತ್ತೇನೆ. ಅದನ್ನು ನಿಪಿ-3 ಎ ಎಂದು ನಿಶಾನೆಗೊಳಪಡಿಸಲಾಯಿತು. ನಿಪಿ 3 ದೃಢೀಕೃತ ನಕಲಾದ್ದರಿಂದ ಅದರಲ್ಲಿ ನಾನು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ 3 ನ್ನು ತಪಾಸಕರು ಅಥಣಿ ಇವರು ಪರೀಶಿಲನೆ ಮಾಡಿರುತ್ತಾರೆ. ನಂತರ ಭೂದಾಖಲೆಗಳ ಸಹಾಯಕ ನಿರ್ದೇಶಕರು ಅಥಣಿ ಇವರು ಸದರಿ ನಿಪಿ 3 ನ್ನು ದೃಢೀಕರಣ ಮಾಡಿರುತ್ತಾರೆ.

2. ನಿಪಿ 3 ರಲ್ಲಿ ನಿಪಿ-3 ಎ ಎಂದು ಗುರುತಿಸಿದ ಜಾಗ ಕ್ಷೇತ್ರ 11 ಗುಂಟೆಯನ್ನು ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ. ನಿಪಿ 3 ರಲ್ಲಿ ಅತಿಕ್ರಮಣ ವಿವರ II ರನ್ನು ನಿಪಿ-3 ಬಿ ಎಂದು ನಿಶಾನೆಗೊಳಪಡಿಸಲಾಯಿತು. ಸರ್ವೆ ರಿ ಸ ನಂ. 1506 ರ ಜಮೀನಿನಲ್ಲಿ ಇರುವ ಎಲ್ಲಾ ಪಟ್ಟಿಗಳನ್ನು ಅಳತೆ ಮಾಡಿ ನಾನು ವರದಿ ತಯಾರು ಮಾಡಿರುತ್ತೇನೆ. ರಿ ಸ ನಂ. 1506 ರಲ್ಲಿ ಇರುವ ಮೂರು ಪಟ್ಟಿಗಳ ಮಾಲೀಕರಿಗೆ ನೋಟೀಸು ಜಾರಿ ಮಾಡಿ ಅಳತೆ ಕಾರ್ಯ ಪೂರೈಸಿರುತ್ತೇನೆ. ಅದೇ ರೀತಿ ಲಾಗು ಹಿಸ್ಸಾದಾರರಿಗೂ ಸಹ ನೋಟೀಸು ನೀಡಿರುತ್ತೇನೆ. ನಿಪಿ-3 ರ ಪಿ ಟಿ ಶೀಟ್ ವರದಿಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯಾಂಶದಿಂದ ಕೂಡಿರುತ್ತವೆ. ಈ ದಾವೆಯ ವಾದಿ ಮತ್ತು ಪ್ರತಿವಾದಿಗೂ ಸಹ ಅಳತೆ ಕಾರ್ಯ ಮಾಡುವ ಪೂರ್ವದಲ್ಲಿ ನೋಟೀಸು ಜಾರಿ ಮಾಡಿರುತ್ತೇನೆ. ಅಳತೆ ಕಾರ್ಯ

ಮಾಡುವ ಪೂರ್ವದಲ್ಲಿ ನಮ್ಮ ಕಛೇರಿಯಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲನೆ ಮಾಡಿ ಅಳತೆ ಕಾರ್ಯ ಮಾಡಿರುತ್ತೇನೆ.

(ಪ್ರತಿವಾದಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ, ಅವರು ಕೈಪಿಯತ್ತ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.